# ಕೃ.ವಿ.ವಿ, ಬೆಂಗಳೂರು, ಕೃಷಿ ಮೇಳ – 2024

---

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ, ಕರ್ನಾಟಕ ಸರ್ಕಾರದ ಕೃಷಿ, ತೋಟಗಾರಿಕೆ, ರೇಷ್ಮೆ, ಅರಣ್ಯ, ಪಶುಸಂಗೋಪನೆ, ಮೀನುಗಾರಿಕೆ, ಕೃಷಿ ಮಾರುಕಟ್ಟೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೃಷಿಕ ಸಮಾಜ ಮತ್ತು ಕರ್ನಾಟಕ ಹಾಲು ಮಹಾಮಂಡಳಿಗಳ ಸಂಯುಕ್ತ ಆಶ್ರಯದಲ್ಲಿ ಕೃ.ವಿ.ವಿ, ಬೆಂಗಳೂರಿನ, ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ ವಾರ್ಷಿಕ ಕೃಷಿ ಮೇಳವನ್ನು ನವೆಂಬರ್ 14 ರಿಂದ 17, 2024 ರವರೆಗೆ ನಾಲ್ಕು ದಿನಗಳ ಕಾಲ **"ಹವಾಮಾನ ಚತುರ ಡಿಜಿಟಲ್ ಕೃಷಿ"** ಎಂಬ ಘೋಷವಾಕ್ಯದೊಂದಿಗೆ ಆಯೋಜಿಸಲಾಗುತ್ತಿದೆ.

**I. ನೂತನ ತಳಿಗಳು:** ಕೃಷಿ ವಿಶ್ವವಿದ್ಯಾನಿಲಯ ಅಭಿವೃದ್ಧಿಪಡಿಸಿರುವ ಒಟ್ಟು ನಾಲ್ಕು ತಳಿಗಳನ್ನು ಕೃಷಿಮೇಳದಲ್ಲಿ ಬಿಡುಗಡೆ ಮಾಡಲಾಗುವುದು.

1) **ಮುಸುಕಿನಜೋಳ ಸಂಕರಣ ತಳಿ: ಎಂ.ಎ.ಹೆಚ್.15–84:–** ಎಂಎಹೆಚ್–15–84 ಏಕ ಸಂಕರಣ ತಳಿಯು ಮಧ್ಯಮಾವಧಿಯಾಗಿದ್ದು (120–125 ದಿನಗಳು), ಈ ಸಂಕರಣ ತಳಿಯು ಎಂಎಹೆಚ್–14–5 (81–85 ಕ್ವಿಂ/ಹೆ) ಗಿಂತ ಶೇ.14.2 ರಷ್ಟು ಅಧಿಕ ಇಳುವರಿ (92–95 ಕ್ವಿಂ/ಹೆ) ನೀಡುತ್ತದೆ. ಎಲೆ ಅಂಗಮಾರಿ ರೋಗಕ್ಕೆ ನಿರೋಧಕತೆ ಹಾಗೂ ಕೇದಿಗೆ ರೋಗಕ್ಕೆ ಸಾಧಾರಣ ಸಹಿಷ್ಣುತೆ ಹೊಂದಿದೆ. ಆಕರ್ಷಕ ಕಾಳಿನ ಕಿತ್ತಳೆ ಬಣ್ಣದ ಕಾಳಿನಿಂದ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ. ಹೆಣ್ಣು ಪೋಷಕದಲ್ಲಿ ಉತ್ತಮ ಬೀಜೋತ್ಪಾದನಾ ಸಾಮರ್ಥ್ಯ ಹಾಗೂ ಗಂಡು ಪೋಷಕದಲ್ಲಿ ಉತ್ತಮ ಪರಾಗ ಸಾಮರ್ಥ್ಯ ಹೊಂದಿವೆ. ವಲಯ 5 ಮತ್ತು ವಲಯ 6ಕ್ಕೆ ಶಿಫಾರಸ್ಸು ಮಾಡಲಾಗಿದೆ.
2) **ಅಲಸಂದೆ ತಳಿ: ಕೆ.ಬಿ.ಸಿ–12:–** ಕೆಬಿಸಿ–12 ತಳಿಯು ಜುಲೈ–ಆಗಸ್ಟ್–ಸೆಪ್ಟೆಂಬರ್ ಮತ್ತು ಜನವರಿ–ಫೆಬ್ರವರಿ ಬಿತ್ತನೆಗೆ ಸೂಕ್ತವಾಗಿರುವ 80–85 ದಿನಗಳ ಅವಧಿಯ ತಳಿಯಾಗಿದ್ದು ಹೆಕ್ಟೇರಿಗೆ 13–14 ಕ್ವಿಂಟಾಲ್ ಇಳುವರಿಯನ್ನು ನೀಡುತ್ತದೆ. ನೇರವಾಗಿರುವ ಸಸ್ಯ ಪ್ರಕಾರವಿದ್ದು ದಪ್ಪ ಮತ್ತು ಹಸಿರು ಬಣ್ಣದ ಕಾಯಿಗಳು ಹಾಗು ಮಧ್ಯಮ ದಪ್ಪ ಮತ್ತು ತಿಳಿ ಕಂದು ಬಣ್ಣದ ಬೀಜಗಳನ್ನೊಂದಿರುತ್ತದೆ. ದುಂಡಾಣು ಎಲೆ ಅಂಗಮಾರಿ ರೋಗ, ನಂಜಾಣು ರೋಗ ಹಾಗೂ ಒಣ ಬೇರು ಕೊಳೆ ರೋಗಕ್ಕೆ ನಿರೋಧಕ ಶಕ್ತಿ ಹೊಂದಿದೆ. ವಲಯ 5 ಮತ್ತು ವಲಯ 6ಕ್ಕೆ ಶಿಫಾರಸ್ಸು ಮಾಡಲಾಗಿದೆ.
3) **ಸೂರ್ಯಕಾಂತಿ ಸಂಕರಣ ತಳಿ: ಕೆ.ಬಿ.ಎಸ್.ಹೆಚ್–90:–** ಪ್ರಸ್ತಾಪಿತ ಸಂಕರಣ ತಳಿಯ 80–82 ದಿನಗಳ ಅಲ್ಪಾವಧಿ ತಳಿಯಾಗಿದ್ದು ಮಧ್ಯಮ ಎತ್ತರವನ್ನು ಹೊಂದಿದೆ. ಈ ಸಂಕರಣ ತಳಿಯು ಕೆಬಿಎಸ್‌ಹೆಚ್–78 ತಳಿಗಿಂತ ಶೇ.21 ರಷ್ಟು ಅಧಿಕ ಬೀಜದ ಇಳುವರಿ (23–24 ಕ್ವಿಂ/ಹೆ) ಹಾಗು ಶೇ.26 ರಷ್ಟು ಅಧಿಕ ತೈಲದ ಇಳುವರಿಯನ್ನು (9.0–9.4 ಕ್ವಿಂ/ಹೆ) ನೀಡುತ್ತದೆ. ವಲಯ 5 ಮತ್ತು ವಲಯ 6ಕ್ಕೆ ಶಿಫಾರಸ್ಸು ಮಾಡಲಾಗಿದೆ.
4) **ಬಾಜ್ರ ನೇಪಿಯರ್ ಸಂಕರಣ ತಳಿ : ಪಿಬಿಎನ್–342:–** ಈ ಸಂಕರಣ ತಳಿಯು ಬಿಎನ್‌ಹೆಚ್–10 (1313.6 ಕ್ವಿಂ/ಹೆ) ತಳಿಗಿಂತ ಶೇ. 14 ರಷ್ಟು ಹೆಚ್ಚಿನ ಹಸಿರು ಮೇವಿನ ಇಳುವರಿ (1497.8 ಕ್ವಿಂ/ಹೆ) ನೀಡಿರುತ್ತದೆ. ಈ ಸಂಕರಣ ತಳಿಯು ಹೆಚ್ಚಿನ ಒಣಮೇವಿನ ಇಳುವರಿ (204.7 ಕ್ವಿಂ/ಹೆ), ಹೆಚ್ಚಿನ ಎಲೆಕಾಂಡ ಅನುಪಾತ (0.74) ಹಾಗೂ ಹೆಚ್ಚಿನ ಕಚ್ಚಾಸಸಾರಜನಕದ ಇಳುವರಿ (9.7 ಕ್ವಿಂ/ಹೆ) ಹಾಗೂ ಉತ್ತಮ ಗುಣಮಟ್ಟದ ಪೌಷ್ಠಿಕಾಂಶವನ್ನು ದಾಖಲಿಸಿದೆ. ವಲಯ 6ಕ್ಕೆ ಅನುಮೋದಿಸಲಾಗಿದೆ.

## II. ಕೃಷಿಮೇಳದಲ್ಲಿ ಡಿಜಿಟಲ್ ಕೃಷಿ ತಂತ್ರಜ್ಞಾನಗಳನ್ನು ಬಳಸಿ ಪ್ರದರ್ಶನಗೊಳ್ಳುತ್ತಿರುವ ತಾಂತ್ರಿಕತೆಗಳು

1) **ಮಲ್ಟಿಸ್ಪೆಕ್ಟ್ರಲ್ ಡ್ರೋನ್:** ಮಣ್ಣು ಮತ್ತು ಬೆಳೆಗಳ ಆರೋಗ್ಯದ ಪರಿವೀಕ್ಷಣೆ
2) **ಕೃಷಿ ಡ್ರೋನ್:** ನಿಖರ ಪ್ರಮಾಣದಲ್ಲಿ ಪೀಡೆನಾಶಕ/ ರಸಗೊಬ್ಬರಗಳನ್ನು 16–18 ನಿಮಿಷಗಳಲ್ಲಿ ಒಂದು ಹೆಕ್ಟೇರ್ ಪ್ರದೇಶವನ್ನು ಸಿಂಪಡಿಸಬಹುದು
3) **ರೊಬೋಟ್ ಕೃಷಿ ಯಂತ್ರ:** ರೊಬೋಟ್ ಆಧಾರಿತ ಬೀಜ ಮತ್ತು ರಸಗೊಬ್ಬರಗಳ ನಿಖರ ಬಳಕೆ
4) **ಹಣ್ಣಿನ ವರ್ಗೀಕರಣ ಯಂತ್ರ (ಕಲರ್ ಸಾರ್ಟರ್):** ಬಣ್ಣ ಮತ್ತು ಪಕ್ವತೆಯ ಆಧಾರದ ಮೇಲೆ ನಿಖರವಾಗಿ ಹಣ್ಣುಗಳನ್ನು ವಿಂಗಡಿಸಬಹುದು
5) **ಸ್ವಯಂಚಾಲಿತ ರಸಗೊಬ್ಬರ ಹರಡುವ ಯಂತ್ರ:** 20 ನಿಮಿಷಗಳಲ್ಲಿ ಎಕರೆಗೆ ಶಿಫಾರಸ್ಸಿನ ರಸಗೊಬ್ಬರವನ್ನು ಹರಡುತ್ತದೆ
6) **ಆಳ ನಿಯಂತ್ರಕ ರೋಟವೇಟರ್:** ಬೆಳೆ ಹಾಗೂ ಮಣ್ಣಿನ ಆಳಕ್ಕೆ ಅನುಗುಣವಾಗಿ ಭೂಮಿ ಸಿದ್ಧಪಡಿಸುವುದು
7) **ಸ್ವಯಂಚಾಲಿತ ಬೂಮ್ ಸ್ಪ್ರೇಯರ್:** ಪೀಡೆನಾಶಕ/ ರಸಗೊಬ್ಬರಗಳನ್ನು ಅಗತ್ಯತೆಗೆ ಅನುಗುಣವಾಗಿ ಸಿಂಪಡಿಸುವ ಯಂತ್ರ 15 ನಿಮಿಷಗಳಲ್ಲಿ ಒಂದು ಎಕರೆಗೆ ಸಿಂಪಡಿಸಬಹುದು.
8) **ಸೌರ ಶಕ್ತಿ ಚಾಲಿತ ಬರ್ಡ್ ಸ್ಕೇರರ್:** 15 ನಿಮಿಷಗಳ ಅಂತರದಲ್ಲಿ ವಿಭಿನ್ನ ರೀತಿಯ ಶಬ್ಧ ಮಾಡಿ ಪಕ್ಷಿಗಳನ್ನು ಚದುರಿಸುತ್ತದೆ.

## III. ಇತರೆ ಆಕರ್ಷಣೆಗಳು

- ಸಮಗ್ರ ಬೇಸಾಯ ಪದ್ಧತಿ ಪ್ರಾತ್ಯಕ್ಷಿಕೆ
- ಖುಷ್ಕಿ ಬೇಸಾಯಕ್ಕೆ ಸೂಕ್ತವಾದ ಬೆಳೆ ಪದ್ಧತಿಗಳು
- ನೂತನವಾಗಿ ಬಿಡುಗಡೆಯಾದ ವಿವಿಧ ಬೆಳೆ ತಳಿಗಳ ಪ್ರಾತ್ಯಕ್ಷಿಕೆ
- ರೇಷ್ಮೆಕೃಷಿ
- ತೋಟಗಾರಿಕೆ ಬೆಳೆಗಳ ಮತ್ತು ನಿಖರ ಕೃಷಿ ಪ್ರಾತ್ಯಕ್ಷಿಕೆ
- ಔಷಧೀಯ ಮತ್ತು ಸುಗಂಧ ದ್ರವ್ಯ ಸಸ್ಯಗಳು
- ಸಿರಿಧಾನ್ಯಗಳು ಹಾಗೂ ಮಹತ್ವ
- ಜಲಾನಯನ ನಿರ್ವಹಣೆ
- ಸಾವಯವ ಕೃಷಿ ಪದ್ಧತಿಗಳು
- ಸಮಗ್ರ ಪೋಷಕಾಂಶಗಳು ಹಾಗೂ ಪೀಡೆ ನಿರ್ವಹಣೆ
- ಮಣ್ಣು ರಹಿತ ಕೃಷಿ
- ಕೃಷಿಯಲ್ಲಿ ನೂತನ ಮಾಹಿತಿ ತಂತ್ರಜ್ಞಾನ
- ರೈತರ ಕೃಷಿ ತಾಂತ್ರಿಕ ಸಮಸ್ಯೆಗಳಿಗೆ ತಜ್ಞರಿಂದ ಸಲಹೆ
- ಮಣ್ಣು ಪರೀಕ್ಷೆಗನುಗುಣವಾಗಿ ಬೆಳೆ ಸ್ಪಂದನೆ ಪ್ರಾತ್ಯಕ್ಷಿಕೆ
- ಹನಿ ಮತ್ತು ತುಂತುರು ನೀರಾವರಿ ಪದ್ಧತಿಗಳು
- ಮಳೆ ಹಾಗೂ ಮೇಲ್ಭಾವಣಿ ನೀರಿನ ಕೊಯ್ಲು
- ಸುಧಾರಿತ ಕೃಷಿ ಯಂತ್ರೋಪಕರಣಗಳ ಪ್ರದರ್ಶನ
- ಕೊಯ್ಲಿನೋತ್ತರ ತಾಂತ್ರಿಕತೆ, ಕೃಷಿ ಉತ್ಪನ್ನ ಸಂಸ್ಕರಣೆ ಮತ್ತು ಮೌಲ್ಯವರ್ಧನೆ
- ಬಿತ್ತನೆ ಬೀಜಗಳ ಪರೀಕ್ಷೆ ಹಾಗೂ ಶೇಖರಣೆ
- ಪಶುಸಂಗೋಪನೆ, ಹೈನುಗಾರಿಕೆ, ಕುರಿ, ಕೋಳಿ ಹಾಗೂ ಮೀನು ಸಾಕಣೆ
- ಜೈವಿಕ ಹಾಗೂ ನವೀಕರಿಸಲ್ಪಡುವ ಇಂಧನ
- ಕೃಷಿ ಆಟೋಮೇಷನ್ ತಂತ್ರಜ್ಞಾನಗಳು
- ಮಾರುಕಟ್ಟೆ ನೈಪುಣ್ಯತೆ ಮಾಹಿತಿ
- ಕೃಷಿ ಪರಿಕರಗಳ ಹಾಗೂ ಪ್ರಕಟಣೆಗಳ ಮಾರಾಟ ವ್ಯವಸ್ಥೆ

## VI. ಕೃಷಿ ಸಾಧಕರಿಗೆ ಪುರಸ್ಕಾರ

**ಅ) ರಾಜ್ಯ ಮಟ್ಟದ ಪ್ರಶಸ್ತಿಗಳು: ಕೃಷಿಯಲ್ಲಿ ಉತ್ತಮ ಸಾಧನೆ ಮಾಡಿದ ರೈತರಿಗೆ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಲಾಗುವುದು**

| ಕ್ರ ಸಂ | ಪ್ರಶಸ್ತಿ | ಪ್ರಶಸ್ತಿ ಸನ್ಮಾನಿತರು |
|---|---|---|
| 1 | ಮಾಜಿ ಪ್ರಧಾನಮಂತ್ರಿ ಶ್ರೀ ಹೆಚ್.ಡಿ. ದೇವೇಗೌಡ ರಾಜ್ಯ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ | **ಶ್ರೀ ಸಿ.ಆರ್. ರಾಧಕೃಷ್ಣ**<br>ಬಿನ್ ರಾಮಪ್ಪ, ಕುರಟಹಳ್ಳಿ ಚಿಂತಾಮಣಿ ತಾಲ್ಲುಕು<br>ಚಿಕ್ಕಬಳ್ಳಾಪುರ ಜಿಲ್ಲೆ ಮೊ:9902266750 |
| 2 | ಡಾ: ಎಂ.ಹೆಚ್. ಮರೀಗೌಡ ರಾಜ್ಯ ಮಟ್ಟದ ಅತ್ಯುತ್ತಮ ತೋಟಗಾರಿಕೆ ರೈತ ಪ್ರಶಸ್ತಿ | **ಶ್ರೀಮತಿ ರೂಪ. ಹೆಚ್.ಪಿ.**<br>ಕೋಂ. ರಾಘವೇಂದ್ರ<br>ಹಾಡೋನಹಳ್ಳಿ, ತೂಬಗೆರೆ<br>ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ<br>ಮೊ:8722129090 |
| 3 | ಕ್ಯಾನ್ ಬ್ಯಾಂಕ್ ರಾಜ್ಯ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ | **ಶ್ರೀ ವಿ. ಎಸ್. ಪ್ರವೀಣ್**<br>ಬಿನ್ ಶಿವೇಗೌಡ<br>ವಗರಹಳ್ಳಿ, ಹಿರಿಹಳ್ಳಿ, ಚನ್ನರಾಯಪಟ್ಟಣ ತಾಲ್ಲೂಕು<br>ಹಾಸನ ಜಿಲ್ಲೆ, ಮೊ:9972117190/ 8197884914 |
| 4 | ಕ್ಯಾನ್ ಬ್ಯಾಂಕ್ ರಾಜ್ಯ ಮಟ್ಟದ ಅತ್ಯುತ್ತಮ ರೈತ ಮಹಿಳೆ ಪ್ರಶಸ್ತಿ | **ಶ್ರೀಮತಿ ವೈ. ಸಿ. ಶಾಂತಮ್ಮ**<br>ಕೋಂ ನರಸಿಂಹಮೂರ್ತಿ<br>ಕಗ್ಗಲಹಳ್ಳಿ, ರಾಮನಗರ ತಾಲ್ಲೂಕು<br>ರಾಮನಗರ ಜಿಲ್ಲೆ<br>ಮೊ:9945154568 |
| 5 | ಡಾ: ಆರ್. ದ್ವಾರಕೀನಾಥ್ ಅತ್ಯುತ್ತಮ ರೈತ ಪ್ರಶಸ್ತಿ | **ಶ್ರೀ ಯು. ಎಂ. ನಾಗವರ್ಮ**<br>ಬಿನ್ ಮಹೇಶ್ ಚಂದ್ರಗುರು. ಯು.ಸಿ.<br>ಉಣ್ಣೇನಹಳ್ಳಿ. ಹಳೇಕೋಟೆ<br>ಹೊಳೆನರಸೀಪುರ ತಾಲ್ಲೂಕು<br>ಹಾಸನ ಜಿಲ್ಲೆ, ಮೊ:7259484266 / 8197769836 |
| 6 | ಡಾ: ಆರ್. ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ | **ಡಾ. ಎಂ. ಶಾಲಿನಿ**<br>ಸಹಾಯಕ ಪ್ರಾಧ್ಯಾಪಕರು (ತೋಟಗಾರಿಕೆ)<br>ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ<br>ಕೃಷಿ ವಿಶ್ವವಿದ್ಯಾನಿಲಯ<br>ಜಿ.ಕೆ.ವಿ.ಕೆ., ಬೆಂಗಳೂರು<br>ಮೊ:9481735592 |

**ಆ) ಜಿಲ್ಲಾ ಮಟ್ಟದ ಪ್ರಶಸ್ತಿಗಳು (20)**

**ಜಿಲ್ಲಾ ಮಟ್ಟದ ಪ್ರಗತಿಪರ ರೈತ ಪ್ರಶಸ್ತಿ ಮತ್ತು ರೈತ ಮಹಿಳಾ ಪ್ರಶಸ್ತಿ:** ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ವ್ಯಾಪ್ತಿಗೆ ಒಳಪಡುವ 10 ಜಿಲ್ಲೆಗಳಲ್ಲಿ ಪ್ರಗತಿಪರ ರೈತ ಪ್ರಶಸ್ತಿ ಮತ್ತು ಪ್ರಗತಿಪರ ರೈತ ಮಹಿಳಾ ಪ್ರಶಸ್ತಿಗಳನ್ನು ಅರ್ಹ ಪ್ರಗತಿ ಪರ ರೈತ ಮತ್ತು ರೈತ ಮಹಿಳೆಯರಿಗೆ ನೀಡಲಾಗುವುದು.

**ಇ) ತಾಲ್ಲೂಕು ಮಟ್ಟದ ಪ್ರಶಸ್ತಿಗಳು (120)**

**ತಾಲ್ಲೂಕು ಮಟ್ಟದ ಪ್ರಗತಿಪರ ಯುವ ರೈತ ಪ್ರಶಸ್ತಿ ಮತ್ತು ಯುವ ರೈತ ಮಹಿಳಾ ಪ್ರಶಸ್ತಿ:** ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ವ್ಯಾಪ್ತಿಗೆ ಒಳಪಡುವ 61 ತಾಲ್ಲೂಕುಗಳಲ್ಲಿ ಪ್ರಗತಿಪರ ಯುವ ರೈತ ಪ್ರಶಸ್ತಿ ಮತ್ತು ಪ್ರಗತಿಪರ ಯುವ ರೈತ ಮಹಿಳಾ ಪ್ರಶಸ್ತಿಗಳನ್ನು ಅರ್ಹ ಪ್ರಗತಿಪರ ಯುವ ರೈತ ಮತ್ತು ಪ್ರಗತಿಪರ ಯುವ ರೈತ ಮಹಿಳೆಯರಿಗೆ ನೀಡಲಾಗುವುದು. ಅಭ್ಯರ್ಥಿಗಳ ವಯಸ್ಸು 35 ವರ್ಷ ಮೀರಿರಬಾರದು.

## V. ಕೃಷಿ ಸಾಧಕರಿಗೆ ಪ್ರಶಸ್ತಿ ಪ್ರದಾನ ವೇಳಾಪಟ್ಟಿ

| ಕ್ರ ಸಂ | ದಿನಾಂಕ | ಜಿಲ್ಲೆಗಳು |
|---|---|---|
| 1 | 14-11-2024 (ಗುರುವಾರ) | ರಾಜ್ಯ ಮಟ್ಟದ ಪ್ರಶಸ್ತಿಗಳ ಪ್ರದಾನ ಮತ್ತು ಬೆಂಗಳೂರು (ನಗರ) ಬೆಂಗಳೂರು |

| | | |
|---|---|---|
| | | (ಗ್ರಾ) ಹಾಗೂ ರಾಮನಗರ |
| 2 | 15–11–2024 (ಶುಕ್ರವಾರ) | ಚಾಮರಾಜನಗರ ಮತ್ತು ಮೈಸೂರು ಹಾಗೂ ಅತ್ಯುತ್ತಮ ಲೇಖನಗಳಿಗೆ ಡಾ. ಆರ್. ದ್ವಾರಕೀನಾಥ್ ಪ್ರಶಸ್ತಿ ಮತ್ತು ಪ್ರೊ. ಬಿ.ವಿ. ವೆಂಕಟರಾವ್ ಪ್ರಶಸ್ತಿಗಳು |
| 3 | 16–11–2024 (ಶನಿವಾರ) | ಹಾಸನ, ಮಂಡ್ಯ ಮತ್ತು ತುಮಕೂರು |
| 4 | 17–11–2024 (ಭಾನುವಾರ) | ಕೋಲಾರ ಮತ್ತು ಚಿಕ್ಕಬಳ್ಳಾಪುರ |

## VI. ಕೃಷಿ ವಸ್ತು ಪ್ರದರ್ಶನ

ಸುಮಾರು 700 ಮಳಿಗೆಗಳಲ್ಲಿ ಕೃ.ವಿ.ವಿ, ಬೆಂಗಳೂರಿನ ಮಳಿಗೆಗಳು, ಕೃಷಿ ಸಂಬಂಧಿ ವಿಶ್ವವಿದ್ಯಾನಿಲಯಗಳು / ಸಂಸ್ಥೆಗಳು, ಅಭಿವೃದ್ಧಿ ಇಲಾಖೆಗಳ ಮಳಿಗೆಗಳು, ಕೃಷಿ ಪರಿಕರಗಳ ಮಳಿಗೆಗಳು, ಕೃಷಿ ಇಂಜಿನಿಯರಿಂಗ್ ಮತ್ತು ಪಶುಸಂಗೋಪನೆ ಮಳಿಗೆಗಳಲ್ಲಿ ನೂತನ ತಂತ್ರಜ್ಞಾನಗಳನ್ನು ಪ್ರದರ್ಶಿಸಲಾಗುವುದು. ರೈತರ ಕೃಷಿ ಸಮಸ್ಯೆಗಳಿಗೆ ತಜ್ಞರಿಂದ ವೈಜ್ಞಾನಿಕ ಸಲಹೆ, ತಜ್ಞ ವಿಜ್ಞಾನಿಗಳ ತಂಡದಿಂದ ಕೃಷಿ ಸಂಬಂಧಿ ಪ್ರಶ್ನೆಗಳಿಗೆ ನೇರ ಪರಿಹಾರ, ಪ್ರಾತ್ಯಕ್ಷಿಕಾ ತಾಕುಗಳು, ಮಳಿಗೆಗಳು ಮತ್ತು ಕೃಷಿ ಮೇಳದ ಕಾರ್ಯಕ್ರಮವನ್ನು ಸಾಮಾಜಿಕ ಜಾಲತಾಣಗಳಲ್ಲಿ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದೆ. ಖುಷ್ಕಿ ಬೇಸಾಯಕ್ಕೆ ಸೂಕ್ತವಾದ ಬೆಳೆ ಪದ್ಧತಿಗಳು, ನೂತನವಾಗಿ ಬಿಡುಗಡೆಯಾದ ವಿವಿಧ ಬೆಳೆ ತಳಿಗಳ ಪ್ರಾತ್ಯಕ್ಷಿಕೆ, ತೋಟಗಾರಿಕೆ ಬೆಳೆಗಳ ಮತ್ತು ನಿಖರ ಕೃಷಿ ಪ್ರಾತ್ಯಕ್ಷಿಕೆ, ಸಮಗ್ರ ಬೇಸಾಯ ಪದ್ಧತಿ ಪ್ರಾತ್ಯಕ್ಷಿಕೆ, ಸಿರಿಧಾನ್ಯಗಳು ಹಾಗೂ ಮಹತ್ವ, ಔಷಧೀಯ ಮತ್ತು ಸುಗಂಧದ್ರವ್ಯ ಸಸ್ಯಗಳು, ಜಲಾನಯನ ನಿರ್ವಹಣೆ, ಸಾವಯವ ಕೃಷಿ ಪದ್ಧತಿಗಳು, ಸಮಗ್ರ ಪೋಷಕಾಂಶಗಳು ಹಾಗೂ ಪೀಡೆ ನಿರ್ವಹಣೆ, ಮಣ್ಣು ಪರೀಕ್ಷೆಗನುಗುಣವಾಗಿ ಬೆಳೆ ಸ್ಪಂದನೆ ಪ್ರಾತ್ಯಕ್ಷಿಕೆ, ಹನಿ ಮತ್ತು ತುಂತುರು ನೀರಾವರಿ ಪದ್ಧತಿಗಳು, ಮಳೆ ಹಾಗೂ ಮೇಲ್ಛಾವಣಿ ನೀರಿನ ಕೊಯ್ಲು, ಸುಧಾರಿತ ಕೃಷಿ ಯಂತ್ರೋಪಕರಣಗಳ ಪ್ರದರ್ಶನ, ಕೊಯ್ಲಿನೋತ್ತರ ತಾಂತ್ರಿಕತೆ, ಕೃಷಿ ಉತ್ಪನ್ನ ಸಂಸ್ಕರಣೆ ಮತ್ತು ಮೌಲ್ಯವರ್ಧನೆ, ಬಿತ್ತನೆ ಬೀಜಗಳ ಪರೀಕ್ಷೆ ಹಾಗೂ ಶೇಖರಣೆ, ಪಶುಸಂಗೋಪನೆ, ಹೈನುಗಾರಿಕೆ, ಕುರಿ, ಕೋಳಿ ಹಾಗೂ ಮೀನು ಸಾಕಣೆ, ಮಾರುಕಟ್ಟೆ ನೈಪುಣ್ಯತೆ ಮಾಹಿತಿ, ಹವಾಮಾನ ಚತುರ ಕೃಷಿ, ಕೃಷಿಯಲ್ಲಿ ನೂತನ ಮಾಹಿತಿ ತಂತ್ರಜ್ಞಾನ, ಜೈವಿಕ ಹಾಗೂ ನವೀಕರಿಸಲ್ಪಡುವ ಇಂಧನ, ರೈತರಿಂದ ರೈತರಿಗಾಗಿ ಚರ್ಚಾಗೋಷ್ಠಿ, ಕೃಷಿ ಪರಿಕರಗಳ ಹಾಗೂ ಪ್ರಕಟಣೆಗಳ ಮಾರಾಟ ವ್ಯವಸ್ಥೆ ಮಾಡಲಾಗುವುದು.

## VII. ವಿಶೇಷ ಸವಲತ್ತುಗಳು

- ಜಿ.ಕೆ.ವಿ.ಕೆ. ಯ ಮಹಾದ್ವಾರದಿಂದ ಕೃಷಿ ಮೇಳದ ಸಭಾಂಗಣಕ್ಕೆ ತಲುಪಲು ಉಚಿತ ಸಾರಿಗೆ ವ್ಯವಸ್ಥೆ.
- ಪ್ರತ್ಯೇಕ ವಾಹನ ನಿಲುಗಡೆ ವ್ಯವಸ್ಥೆ.
- ಉಚಿತ ಪ್ರವೇಶ
- ರಿಯಾಯಿತಿ ದರದಲ್ಲಿ ಮುದ್ದೆ ಊಟದ ವ್ಯವಸ್ಥೆ.